# ದ್ವಾದಶ ಶಿವಲಿಂಗ

ನೋಡಲು ಸುಂದರವಾದ ಈ ಶಿವಲಿಂಗಗಳನ್ನು ಚನ್ನಗಿರಿ ತಾಲ್ಲೂಕಿನ ಗರಗ ಗ್ರಾಮದ ಶಂಕರಾಚಾರ್ಯರ ಮನೆಯಲ್ಲಿ ನೋಡಬಹುದು. ಒಟ್ಟು 12 ಶಿವಲಿಂಗಗಳು ಅಲ್ಲಿವೆ.

**- ನವೀನ್ ತಿಮ್ಮೋಜಿ,**
**ಚಿತ್ರದುರ್ಗ**





# ಕಂಡಿರಾ ಫ್ಯಾಷನ್ ಅನಾನಸ್!

ಹಸಿರು, ಬಿಳಿ, ಕೇಸರಿ, ಕೆಂಪು.. ಹೀಗೆ ನಾನಾ ಬಣ್ಣಗಳ, ಚಿಕ್ಕ ದೊಡ್ಡ ಗಾತ್ರದ ಅನಾನಸ್ ಹಣ್ಣುಗಳು ಕಾಣಸಿಗುತ್ತವೆ. ಆದರೆ ಫ್ಯಾಷನ್ ಅನಾನಸ್ ಕಂಡಿರುವವರು ವಿರಳ. ಇದು ಅತೀ ಚಿಕ್ಕ ಅನಾನಸ್ ಆಗಿದ್ದು, ಹೆಸರೇ ಸೂಚಿಸುವಂತೆ ಅಲಂಕಾರಿಕ ಹಣ್ಣು. ಇದು ಕಂಡುಬಂದಿದ್ದು ದಕ್ಷಿಣಕನ್ನಡ ಜಿಲ್ಲೆಯ ವಿಟ್ಲದ ಜಾನಕಿಯವರ ಮನೆಯ ಹೂದೋಟದಲ್ಲಿ!

**-ದಿನೇಶ್ ಸಿ. ಹೆಚ್., ಬಂಟ್ವಾಳ**

# ಒಗ್ಗಟ್ಟಿನಲ್ಲಿ ಬಲ!

ಉಡುಪಿ ನಗರದ ಹೊರವಲಯದಲ್ಲಿರುವ ಕಿನ್ನಿಮೂಲ್ಕಿಯಲ್ಲಿ, ನೆಲ ಮಟ್ಟದಿಂದ ಅಂದಾಜು ಹತ್ತು ಅಡಿ ಎತ್ತರದಲ್ಲಿರುವ ಮನೆ ಮಾಡಿನ ಮೇಲೆ, ಗೆದ್ದಲು ಹುಳಗಳು ಹುತ್ತ ಕಟ್ಟಿವೆ. ಹುತ್ತ ನಿರ್ಮಾಣ ಮಾಡಲು ಸುಮಾರು ನಾಲ್ಕು ಬುಟ್ಟಿಯಷ್ಟು ಅಂಟು ಮಣ್ಣನ್ನು ಗೆದ್ದಲು ಹುಳಗಳು ಬಳಸಿಕೊಂಡಿವೆ.

ತೀರ ಚಿಕ್ಕ ಗಾತ್ರದ ಗೆದ್ದಲು ಹುಳಗಳು ಸಂಘಟಿತವಾಗಿ ಅಷ್ಟೊಂದು ಮಣ್ಣಿನ ರಾಶಿಯನ್ನು ನೆಲದಿಂದ ಹತ್ತು ಅಡಿ ಎತ್ತರದಲ್ಲಿರುವ ಮನೆ ಮಾಡಿನ ಮೇಲೆ ಸಾಗಿಸಿದ್ದು ವಿಸ್ಮಯವೇ ಸರಿ. ಅವುಗಳು ಒಗ್ಗಟ್ಟಿನಿಂದ ನಡೆಸಿದ ಕಾರ್ಯ 'ಒಗ್ಗಟ್ಟಿನಲ್ಲಿ ಬಲ ಇದೆ' ಎಂಬುದನ್ನು ಸಾಬೀತಪಡಿಸಿದೆ.

**ಚಿತ್ರ- ಬರಹ: ತಾರಾನಾಥ್ ಜೆ. ಮೇಸ್ತ,**
**ಶಿರೂರು**

